**<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>**
**<u>ದಕ್ಷಿಣ ಕನ್ನಡ, ಮಂಗಳೂರು</u>**

**<u>ಸೆಷನ್ಸ್ ಕೇಸ್ ನಂಬ್ರ 211/2023</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀಮತಿ ಸೌಮ್ಯ ಜೆ | <u>ಪ್ರಾಸಾಃ 7</u> |
| ಗಂಡನ ಹೆಸರು | : | ನವೀನ್ ಕುಮಾರ್ | ಚಾಸಾಃ 14 |
| ಪ್ರಾಯ | : | 38 ವರ್ಷ | **ದಿನಾಂಕಃ 09.04.2026** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಪೋಲಿಸ್ ಉಪನಿರೀಕ್ಷಕರು, ಮೆಸ್ಕಾಂ ಜಾಗೃತ ದಳ, ಉಡುಪಿ | |
| ವಾಸಸ್ಥಳ | : | ಉಡುಪಿ | |

**<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>**

ನಾನು ಮಾರ್ಚ್ 2022 ರಿಂದ ಆಗಸ್ಟ 2023 ರವರೆಗೆ ವೇಣೂರು ಪೊಲಿಸ್ ಠಾಣೆಯಲ್ಲಿ ಪೋಲಿಸ್ ಉಪನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 11.07.2023 ರಂದು ನಾನು ಠಾಣಾ ರೌಂಡ್ಸ್ ಕರ್ತವ್ಯದಲ್ಲಿರುವಾಗ, ಸಂಜೆ ಸಮಯ ಸುಮಾರು 4.00 ಗಂಟೆಗೆ ಠಾಣಾ ಹಗಲು ಪ್ರಭಾರ ಕರ್ತವ್ಯದಲ್ಲಿದ್ದಾಗ ಚಾಸಾ-13 ರವರು ನನಗೆ ದೂರವಾಣಿ ಕರೆ ಮಾಡಿ, ಠಾಣೆಯ ಅಪರಾಧ ಕ್ರಮಾಂಕ 39/2023 ಪ್ರಕರಣ ದಾಖಲಾದ ಬಗ್ಗೆ ಮತ್ತು ಅದರ ವಿವರಗಳನ್ನು ತಿಳಿಸಿರುತ್ತಾರೆ. ಆ ಸಮಯ ನಾನು ಚಾಸಾ-13 ರವರಿಗೆ ತಕ್ಷೀರು ಸ್ಥಳದ ಮಹಜರು ಬಗ್ಗೆ ಸರ್ಕಾರಿ ಪಂಚರನ್ನು ನೇಮಿಸಿ ಕಳುಹಿಸಿಕೊಡುವಂತೆ ಬೆಳ್ತಂಗಡಿ ತಾಲೂಕು ದಂಡಾಧಿಕಾರಿಯವರಿಗೆ ಇಮ್ಯೆಲ್ ಮೂಲಕ ಕೊರಿಕೆ ಪತ್ರವನ್ನು ಕಳುಹಿಸಿಕೊಡುವಂತೆ ತಿಳಿಸಿರುತ್ತೇನೆ. ನಂತರ ನಾನು ಘಟನಾ ಸ್ಥಳಕ್ಕೆ ಬೇಟಿ ನೀಡಿರುತ್ತೇನೆ. ಅಲ್ಲಿಗೆ ತಾಲೂಕು ದಂಡಾಧಿಕಾರಿಯವರ ಆದೇಶದಂತೆ

ಚಾಸಾ-6 ಮತ್ತು 7 ರವರು ಬಂದಿದ್ದು, ಘಟನಾ ಸ್ಥಳದಲ್ಲಿ ಹಾಜರಿದ್ದ ಪಿರ್ಯಾದಿದಾರರು ತಕ್ಷೀರು ಸ್ಥಳವನ್ನು ತೋರಿಸಿಕೊಟ್ಟಿದ್ದು ಪಂಚರ ಸಮಕ್ಷಮ ತಕ್ಷೀರು ಸ್ಥಳದ ಮಹಜರನ್ನು ಸಂಜೆ 5.00 ರಿಂದ 6.00 ಗಂಟೆಯ ಸಮಯದಲ್ಲಿ ತಯಾರಿಸಲಾಯಿತು. ಅದೇ ಸಮಯಕ್ಕೆ ಅಲ್ಲಿ ಕರಡು ನಕಾಶೆಯನ್ನು ಸಹ ತಯಾರಿಸಲಾಯಿತು ಮತ್ತು ಫೋಟೋಗಳನ್ನು ತೆಗೆಯಲಾಯಿತು. ಸದರಿ ಮಹಜರಿಗೆ ಪಂಚರ ಸಹಿಗಳನ್ನು ಪಡೆದಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ಮಹಜರನ್ನು ಮತ್ತು ನಕ್ಷೆಯನ್ನು ಈಗಾಗಲೇ ನಿಪಿ-2 ಮತ್ತು 3 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಮತ್ತು 3(ಡಿ) ಎಂದು ಗುರುತಿಸಲಾಯಿತು. ಮಹಜರು ಕಾಲಕ್ಕೆ ತೆಗೆದ ಫೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿರುತ್ತದೆ.

3. ನಂತರ ತನಿಖೆಯನ್ನು ಮುಂದುವರೆಸಿ ಆರೋಪಿಯ ಪತ್ತೆಯ ಬಗ್ಗೆ ಹೆಚ್ ಸಿ 327 ಮತ್ತು ಪಿಸಿ 387 ರವರೊಂದಿಗೆ ಆರೋಪಿಯ ಮನೆಗೆ ಹೋದಾಗ, ಆರೋಪಿ ಹರೀಶ್ ಪೂಜಾರಿ ಎನ್ನುವವರು ಅವರ ಮನೆಯ ಅಂಗಳದಲ್ಲಿ ನಿಂತಿದ್ದವರ ಹೆಸರು ಮತ್ತು ವಿಳಾಸ ಕೇಳಲಾಗಿ ಅದನ್ನು ಖಚಿತಪಡಿಸಿಕೊಂಡು, ಅವರಲ್ಲಿ ಪ್ರಕರಣದ ಬಗ್ಗೆ ಕೂಲಂಕುಷವಾಗಿ ವಿಚಾರಿಸಲಾಗಿ, ಆರೋಪಿತನು ತನ್ನ ತಪ್ಪನ್ನು ಒಪ್ಪಿಕೊಂಡಿರುತ್ತಾನೆ. ಆತನ ಸ್ವಇಚ್ಛಾ ಹೇಳಿಕೆಯನ್ನು ಸಂಜೆ 6.30 ರಿಂದ 7.30 ರ ಸಮಯದಲ್ಲಿ ಪಡೆಯಲಾಯಿತು. ಆರೋಪಿತನು ಆತನ ಹೇಳಿಕೆಯಲ್ಲಿ ನಾನು ಕೊರಗಜ್ಜ ಕಟ್ಟೆಗೆ ಹಾಕಿದ ಚಪ್ಪರಕ್ಕೆ ಉರಿಯುತ್ತಿರುವ ಹಣತೆಯನ್ನು ತೆಂಗಿನಗರಿಗಳಿಗೆ ಹಿಡಿದ ಪರಿಣಾಮ, ಚಪ್ಪರಕ್ಕೆ ಹಾಕಿದ ಪ್ಲಾಸ್ಟಿಕ್

ಟರ್ಪಾಲು ಹಾಗೂ ತೆಂಗಿನ ಗರಿಗಳು ಉರಿದು ಹೋಗಿರುತ್ತದೆ. ನಾನು ಬೆಂಕಿ ಉರಿಸಿದ ಹಣತೆಯನ್ನು ತೋರಿಸಿಕೊಡುವುದಾಗಿ ನುಡಿದಿರುತ್ತಾರೆ. ಸಾಕ್ಷಿ ಗುರುತಿಸಿದ ಆರೋಪಿಯ ಸ್ವಇಚ್ಛಾ ಹೇಳಿಕೆಯ ಭಾಗವನ್ನು ನಿಪಿ-13 ಎಂದು, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಈಗಾಗಲೇ ಸ್ಥಳ ಮಹಜರುಸಮಯದಲ್ಲಿ ಹಾಜರಿದ್ದ ಪಂಚರಾದ ಚಾಸಾ-6 ಮತ್ತು 7 ರವರನ್ನು ಸ್ವತ್ತು ಸ್ವಾದೀನ ಮಹಜರಿಗೆ ಸಹಕರಿಸುವಂತೆ ಸ್ಥಳದಲ್ಲಿ ನೋಟಿಸು ಜಾರಿ ಮಾಡಿ, ಅವರನ್ನು ಆಪಾದಿತನ ಜೊತೆ ಕರೆದುಕೊಂಡು ಗುಡಿಯ ಬಳಿ ಹೋದಾಗ, ಅಪಾದಿತನು ಗುಡಿಯ ಮೇಲ್ಭಾಗದಲ್ಲಿದ್ದ ಹಣತೆಯನ್ನು ತೋರಿಸಿ ಇದೇ ಹಣತೆಯಿಂದ ಚಪ್ಪರಕ್ಕೆ ಹೊದಿಸಿದ ಪ್ಲಾಸ್ಟಿಕ್ ಟರ್ಪಾಲು ಹಾಗೂ ತೆಂಗಿನ ಗರಿಗೆ ಬೆಂಕಿ ನೀಡಿರುತ್ತೇನೆ ಎಂದು ಹೇಳಿ, ಬೆಂಕಿಯಿಂದ ಸುಟ್ಟು ಬಾಕಿ ಉಳಿದ ಟರ್ಪಾಲು ಹಾಗೂ ಹಣತೆಯನ್ನು ತೆಗೆದು ತೋರಿಸಿಕೊಟ್ಟದ್ದನ್ನು ಪಂಚರ ಸಮಕ್ಷಮ ಸಮಯ ಸಂಜೆ 7.30 ರಿಂದ 8.00 ಗಂಟೆಗೆ ಸ್ವತ್ತು ಸ್ವಾಧೀನತಾ ಮಹಜರನ್ನು ತಯಾರಿಸಿ ವಶಕ್ಕೆ ಪಡೆದಿರುತ್ತೇನೆ. ಸಾಕ್ಷಿ ಎಂ.ಒ-1 ಮತ್ತು 2 ನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಸದರಿ ಮಹಜರನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು **ನಿಪಿ-8(ಸಿ)** ಎಂದು ಗುರುತಿಸಲಾಯಿತು. ಮಹಜರು ಕಾಲಕ್ಕೆ ತೆಗೆದ ಫೋಟೊಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-9(2) ಎಂದು ಗುರುತಿಸಲಾಗಿರುತ್ತದೆ.

4. ನಂತರ ಆರೋಪಿ ಹಾಗೂ ಸ್ವಾಧೀನಪಡಿಸಿದ ಸ್ವತ್ತುಗಳೊಂದಿಗೆ ಠಾಣೆಗೆ ಬಂದು ಸ್ವತ್ತು ಪಟ್ಟಿ ಸಂಖ್ಯೆ 24/2023 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಹಾಗೂ ಆರೋಪಿಯನ್ನು ಸಿಬ್ಬಂದಿಯ ಭದ್ರಿಕೆಯಲ್ಲಿ

ಠಾಣಾ ಲಾಕ್ ಅಪ್ ನಲ್ಲಿ ಇರಿಸಿರುತ್ತೇನೆ.

5. ದಿನಾಂಕ 12.07.2023 ರಂದು ಸದರಿ ಪ್ರಕರಣದ ಚಾಸಾ-3 ರಿಂದ 5 ರವರ ಹೇಳಿಕೆಗಳನ್ನು ದಾಖಲಿಸಿರುತ್ತೇನೆ. ಅದೇ ದಿನ ಸದರಿ ಪ್ರಕರಣದಲ್ಲಿ ತನಿಖೆಯನ್ನು ಮುಂದುವರೆಸಿ, ದಸ್ತಗಿರಿ ಪಡಿಸಿದ ಆರೋಪಿಯನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸುವರೇ ರಿಮಾಂಡ್ ಅರ್ಜಿಯೊಂದಿಗೆ ಸಿಬ್ಬಂದಿಗಳೊಂದಿಗೆ ಕಳುಹಿಸಿರುತ್ತೇನೆ. ನಂತರ ತಕ್ಷೀರು ಸ್ಥಳವು ಯಾರಿಗೆ ಸೇರಿದ್ದಾಗಿ ಎನ್ನುವ ಬಗ್ಗೆದೃಢಪತ್ರವನ್ನುನೀಡುವಂತೆ ಮಾನ್ಯ ತಹಶೀಲ್ದಾರ್ ಬೆಳ್ತಂಗಡಿ ಇವರಿಗೆ ಕೋರಿಕೆ ಪತ್ರವನ್ನು ಕಳುಹಿಸಿರುತ್ತೇನೆ. ಸದರಿ ಪ್ರಕರಣದ ಪ್ರ.ವ ವರದಿಯಲ್ಲಿ ದಾಖಲಾದ ಇತರ ಆರೋಪಿಗಳಾದ ಡಾಃರಾಜೇಶ್ ಬಾದ್ರಿಲ , ರಮೇಶ್ ಕುಡ್ಮೇರು, ಓಂ ಪ್ರಸಾದ್ , ಪ್ರಶಾಂತ್ ಬಂಟ್ವಾಳ ರವರಿಗೆ ಮುಂದಿನ ವಿಚಾರಣೆಗೆ ಹಾಜರಾಗುವಂತೆ ನೋಟಿಸು ನೀಡಿರುತ್ತೇನೆ.

6. ದಿನಾಂಕ 24.07.2023 ರಂದು ಸದರಿ ಪ್ರಕರಣದಲ್ಲಿ ತನಿಖೆಯನ್ನು ಮುಂದುವರೆಸಿ ಶ್ರೀ ಕೊರಗಕಲ್ಲು ಸ್ವಾಮಿ ಕೊರಗಜ್ಜ ಸೇವಾ ಟ್ರಸ್ಟ್ ಬಾಡಾರು ಬಜಿರೆ ಗ್ರಾಮ, ಶ್ರೀ ಸ್ವಾಮಿ ಕೊರಗಜ್ಜ ಸೇವಾ ಟ್ರಸ್ಟ್ (ರಿ), ಕೊರಗಕಲ್ಲು , ಬಾಡಾರು , ಬಜಿರೆ ಗ್ರಾಮ, ಎಂಬ ಟ್ರಸ್ಟ್ ಗಳು ಧಾರ್ಮಿಕ ದತ್ತಿ ಇಲಾಖೆಯಲ್ಲಿ ನೋಂದಣಿಯಾಗಿರುವ ಬಗ್ಗೆ ದೃಢಪತ್ರವನ್ನು ನೀಡುವಂತೆ ಕೋರಿಕೆ ಪತ್ರವನ್ನು ಮಾನ್ಯ ಸಹಾಯಕ ಆಯುಕ್ತರ ಕಚೇರಿ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿ ಇಲಾಖೆ ಮಂಗಳೂರು ಇವರಿಗೆ ಸಲ್ಲಿಸಿರುತ್ತೇನೆ.

7. ದಿನಾಂಕ 10.08.2023 ರಂದು ಸದರಿ ಪ್ರಕರಣದ ಪಿರ್ಯಾದಿದಾರರು ಠಾಣೆಗೆ ಹಾಜರಾಗಿ ನೀಡಿದ ಮರುಹೇಳಿಕೆಯನ್ನು ಪಡೆದು ದಾಖಲಿಸಿರುತ್ತೇನೆ. ನಂತರ ಸಾಕ್ಷ್ಯದಾರರಾದ ಚಾಸಾ-2 ರವರು ಠಾಣೆಗೆ ಹಾಜರಾಗಿ ಆರೋಪಿತ ಕೊರಗಜ್ಜ ಕಟ್ಟೆಯ ಚಪ್ಪರಕ್ಕೆ ಕಟ್ಟೆ ಬಳಿ ಉರಿಯುತ್ತಿದ್ದ ಹಣತೆಯಿಂದ ಬೆಂಕಿ ಕೊಟ್ಟ ದೃಶ್ಯವನ್ನು ಮೊಬೈಲಿನಲ್ಲಿ ವಿಡಿಯೋ ಮಾಡಿದ್ದು, ಸದರಿ ದೃಶ್ಯವನ್ನು ಸುದೀ ಸ್ಟುಡಿಯೋದ ಸುದೇಶ್ ಹೆಗ್ಡೆರವರಿಂದ ಸಿಡಿಗೆ ವರ್ಗಾಯಿಸಿ , ಸದರಿ ಸಿಡಿಯನ್ನು ಠಾಣೆಗೆ ತಂದು ಹಾಜರುಪಡಿಸಿದ್ದು ಅದನ್ನು ಸ್ವೀಕರಿಸಿ ಆ ಸಮಯ ಪಂಚರಾದ ಚಾಸಾ-8 ಮತ್ತು 9 ರವರ ಸಮಕ್ಷಮ ಠಾಣೆಯಲ್ಲಿರುವ ಗಣಕಯಂತ್ರದ ಮೂಲಕ ಸದರಿ ಸಿಡಿಯಲ್ಲಿದ್ದ ದೃಶ್ಯಾವಳಿಗಳನ್ನು ಪರಿಶೀಲಿಸಲಾಗಿ, ಆರೋಪಿತನು ಸದರಿ ಕೊರಗಜ್ಜನ ಕಟ್ಟೆಯ ಒಳಗಿನಿಂದ ಬರುವ ದೃಶ್ಯ ಹಾಗೂ ಅದೇ ಸಮಯ ಬೆಂಕಿ ಹಾಗೂ ಹೊಗೆ ಬರುತ್ತಿರುವ ದೃಶ್ಯ ಕಂಡು ಬಂದಿರುತ್ತದೆ. ಸದರಿ ಸಿಡಿಯನ್ನು ಪಂಚರ ಸಮಕ್ಷಮ ಬೆಳಗ್ಗೆ 11.00 ರಿಂದ 12.00 ಗಂಟೆಯ ಸಮಯದಲ್ಲಿ ಸ್ವತ್ತು ಸ್ವಾದೀನತಾ ಮಹಜರು ತಯಾರಿಸಿ ಸ್ವಾಧೀನಪಡಿಸಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ಮಹಜರನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು **ನಿಪಿ-6(ಸಿ)** ಎಂದು ಗುರುತಿಸಲಾಯಿತು. ಮಹಜರು ಕಾಲಕ್ಕೆ ತೆಗೆದ ಪೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿ ಗುರುತಿಸಿದ ಸಿಡಿಯನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿರುತ್ತದೆ ನಂತರ ಅವುಗಳನ್ನು ಸ್ವತ್ತು ಪಟ್ಟಿ ಸಂಖ್ಯೆ 35/2023 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-2 ಮತ್ತು 9 ರವರ

ಹೇಳಿಕೆಗಳನ್ನು ದಾಖಲಿಸಿರುತ್ತೇನೆ. ನಂತರ ನನಗೆ ವರ್ಗಾವಣೆಯಾದ್ದರಿಂದ , ಪ್ರಕರಣದ ಕಡತವನ್ನು ಚಾಸಾ-15 ರವರಿಗೆ ಹಸ್ತಾಂತರಿಸಿರುತ್ತೇನೆ.

8. ಸಾಕ್ಷಿಗೆ ನಿಪಿ-5 ರ ಸಿಡಿಯನ್ನು ನ್ಯಾಯಾಲಯದ ಅನುಮತಿ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಪ್ಲೇ ಮಾಡಿ ತೋರಿಸಲಾಗಿ, ಅದರಲ್ಲಿರುವ ದೃಶ್ಯಾವಳಿಗಳನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ವಿ.ಸಿ ಮೂಲಕ ಹಾಜರುಪಡಿಸಿದ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ವಿ.ಕೆ ವಕೀಲರಿಂದ**

9. ಈ ಪ್ರಕರಣದಲ್ಲಿ ನಾನು ತನಿಖಾಧಿಕಾರಿಯಾಗಿದ್ದು, ಭಾಗಶಃ ತನಿಖೆಯನ್ನು ಮಾಡಿರುತ್ತೇನೆ. ಮುಂದಿನ ತನಿಖಾಧಿಕಾರಿಯವರು ಏನು ತನಿಖೆ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ತಿಳಿದಿಲ್ಲ. ದೂರು ನೀಡುವಾಗ ವಿಡಿಯೋ ಮಾಡಿದ ಬಗ್ಗೆ ಪ್ರದೀಪ್ ರವರಿಗೆ ಗೊತ್ತಿತ್ತಾ ಎಂದರೆ ಪಿರ್ಯಾದಿದಾರರಿಗೆ ಆ ಸಮಯದಲ್ಲಿ ಗೊತ್ತಿರುವುದಿಲ್ಲ, ನಂತರದಲ್ಲಿ ತಿಳಿದು ಬಂದಿರುತ್ತದೆ. ಪ.ವ ವರದಿಯಲ್ಲಿ ದೂರು 3.30 ಗಂಟೆಗೆ ದಾಖಲಾದ ಬಗ್ಗೆ ನಮೂದು ಇದೆ. ಆ ಸಮಯದವರೆಗೆ ನನ್ನ ಪ್ರಕಾರ ಅವರಿಗೆ ವಿಡಿಯೋ ಮಾಡಿರುವ ಬಗ್ಗೆ ತಿಳಿದಿರಲಿಲ್ಲ.

10. ಮೊಬೈಲನ್ನು ಪ್ರಥಮವಾಗಿ ದಿನಾಂಕ 10.08.2023 ರಂದು ಪಡೆದಿರುತ್ತೇನೆ, ಮೊಬೈಲನ್ನು ತಂದು ಕೊಡಲು ನೋಟಿಸು ನೀಡಿರುವುದಿಲ್ಲ, ಸಾಕ್ಷಿದಾರರು ತಾವಾಗಿಯೇ ಠಾಣೆಗೆ ಹಾಜರಾಗಿ ನೀಡಿರುತ್ತಾರೆ. ಅದಕ್ಕಿಂತ ಪೂರ್ವದಲ್ಲಿ ಮೊಬೈಲ್ ನ್ನು ಮತ್ತು ವಿಡಿಯೋಗಳನ್ನು ನೋಡಲು ಪ್ರಯತ್ನ

ಪಟ್ಟಿರುವುದಿಲ್ಲ. ನಾನು ಸ್ಟುಡಿಯೋಗೆ ಹೋಗಿ ಮೊಬೈಲಿನಲ್ಲಿದ್ದ ದೃಶ್ಯಾವಳಿಗಳನ್ನು ಸಿಡಿಗೆ ವರ್ಗಾವಣೆ ಮಾಡಿ ತರಲು ನಾನಾಗಲೀ ನಮ್ಮ ಠಾಣೆಯವರಾಗಲೀ ಯಾರು ಹೇಳಿರುವುದಿಲ್ಲ.

11. ಪಿರ್ಯಾದಿದಾರರು ದೂರಿನಲ್ಲಿ ನನಗೆ ಟ್ರಸ್ಟ ನ ಬಗ್ಗೆ ಹೇಳಿರುವುದಿಲ್ಲ. ಟ್ರಸ್ಟ ನೋಂದಣಿಯಾಗಿರುತ್ತದಾ ಇಲ್ಲವೋ ಎಂಬ ಬಗ್ಗೆ ಸದರಿ ಇಲಾಖೆಗೆ ಕೋರಿಕೆ ಪತ್ರವನ್ನು ಬರೆದಿರುತ್ತೇನೆ. ಪಿರ್ಯಾದಿದಾರರು ತಮ್ಮ ಮರುಹೇಳಿಕೆಯಲ್ಲಿ ಟ್ರಸ್ಟಿನ ಬಗ್ಗೆ ಹೇಳಿದ್ದು ನಾನು ಸದರಿ ಕೋರಿಕೆ ಪತ್ರವನ್ನು ಬರೆದಿರುತ್ತೇನೆ. ದಿನಾಂಕ 10.08.2023ರಂದು ಪಿರ್ಯಾದಿದಾರರು ಮರುಹೇಳಿಕೆ ಯನ್ನು ನೀಡಿರುತ್ತಾರೆ. ದಿನಾಂಕ 10.08.2023 ರ ನಂತರ ನಾನು ವರ್ಗಾವಣೆಯಾದ ಕಾರಣ ಪ್ರಕರಣದ ತನಿಖೆಯನ್ನು ಮುಂದುವರೆಸಿರುವುದಿಲ್ಲ. ನನಗೆ ಆಗಸ್ಟ ನಲ್ಲಿ ವರ್ಗಾವಣೆ ಯಾಗಿದ್ದು ದಿನಾಂಕ ನೆನಪಿಲ್ಲ. ಅಲ್ಲಿಂದ ನನಗೆ ಪಶ್ಚಿಮ ವಲಯ ಕಚೇರಿ ಮಂಗಳೂರಿಗೆ ವರ್ಗಾವಣೆಯಾಗಿತ್ತು. ನನಗೆ ಯಾವ ದಿನಾಂಕ ವರ್ಗಾವಣೆಯ ಪತ್ರ ಬಂದಿರುತ್ತದೆ ಮತ್ತು ನಾನು ಯಾವ ದಿನಾಂಕದಂದು ವರ್ಗಾವಣೆಯ ಸ್ಥಳಕ್ಕೆ ಕರ್ತವ್ಯಕ್ಕೆ ಸೇರಬೇಕೆನ್ನುವ ಬಗ್ಗೆ ನನಗೆ ಈಗ ನೆನಪಿಲ್ಲ.

12. ದಿನಾಂಕ 10.08.2023 ರಂದು ಯಾರಿಗೆಲ್ಲಾ ಟ್ರಸ್ಟ ನ ಮಾಹಿತಿ ಕೊಡಲು ಪತ್ರ ಬರೆದಿರುತ್ತೀರಾ ಎಂದರೆ ದಿನಾಂಕ 24.07.2023 ರಂದು ಪತ್ರವನ್ನು ಬರೆದಿರುವುದಾಗಿದೆ, ದಿನಾಂಕ 10.08.2023 ರಂದು ಯಾವುದೇ ಪತ್ರ ಬರೆದಿರುವುದಿಲ್ಲ. ಟ್ರಸ್ಟಿನ ಬಗ್ಗೆ ಪಿರ್ಯಾದಿದಾರರಿಂದ ಯಾವುದೇ ದಾಖಲೆಗಳನ್ನು

ಪಡೆದಿರುವುದಿಲ್ಲ. ಪಿರ್ಯಾದಿದಾರರು ಅದಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಹಾಗಾಗಿ ಪಡೆದಿರುವುದಿಲ್ಲ. ಪಿರ್ಯಾದಿದಾರರು ನೀಡಿದ ಮರುಹೇಳಿಕೆಯ ನಂತರ, ಸದರಿ ಟ್ರಸ್ಟಿನ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಮತ್ತು ಪದಾಧಿಕಾರಿಗಳು ಯಾರು ಎಂದು ನಾನು ವಿಚಾರಣೆ ಮಾಡಿರುವುದಿಲ್ಲ.

13. ಕೊರಗಜ್ಜನ ಕಟ್ಟೆಯ ವಿವಾದ ಈ ಪ್ರಕರಣದ ದಿನಾಂಕದಿಂದ ಸುಮಾರು ವರ್ಷದ ಮೊದಲಿನಿಂದಲೂ ಇರುತ್ತದೆ. ಆ ಬಗ್ಗೆ ಪದೇ ಪದೇ ನಿಮ್ಮ ಠಾಣೆಯಲ್ಲಿ ದೂರುಗಳು ದಾಖಲೆಯಾಗಿದ್ದು ಇರುತ್ತದೆ ಎಂದರೆ ಇಲ್ಲ. ವಿವಾದಿತ ಜಾಗಕ್ಕೆ ನಾನು ದಿನಾಂಕ 11.07.2023 ರಂದು ಪ್ರಥಮವಾಗಿ ಹೋಗಿರುತ್ತೇನೆ. ಅದಕ್ಕೆ ಪೂರ್ವದಲ್ಲಿ ಸದರಿ ಜಾಗಕ್ಕೆ ನಾನು ಯಾವತ್ತೂ ಹೋಗಿರುವುದಿಲ್ಲ. ವಿವಾದಿತ ಜಾಗದಲ್ಲಿ ಕಟ್ಟಡ ಇರುತ್ತದಾ ಎಂದರೆ ಇಲ್ಲ. ವಿವಾದಿತ ಸ್ಥಳದ ಬಹಳ ಹತ್ತಿರದಲ್ಲಿರುವ ಮನೆ ಯಾವುದು ಎಂದರೆ 15 ಮೀಟರ್ ದೂರದಲ್ಲಿ ಆರೋಪಿ ಹರೀಶ್ ಪೂಜಾರಿಯವರ ಮನೆ ಇರುತ್ತದೆ. ಸದರಿ ಮನೆಯ ಡೋರ್ ನಂಬರ್ ಮತ್ತು ಮನೆಯ ವಾಸಿಗಳ ಬಗ್ಗೆ ವಿಚಾರಿಸಿರುವುದಿಲ್ಲ. ಪಿರ್ಯಾದಿದಾರರು ವಿವಾದಿತ ಕಟ್ಟೆಯ ಬಾಬ್ತು ಕಾನೂನು ರೀತಿಯಲ್ಲಿ ಅಧ್ಯಕ್ಷರು ಎಂದು ಪರಿಗಣಿಸಿರುತ್ತೀರಾ ಎಂದರೆ ಉತ್ತರ ಹೇಳಲು ನನಗೆ ತಿಳಿದಿಲ್ಲ. ಪಿರ್ಯಾದಿದಾರರು ಕೊಟ್ಟ ದೂರನ್ನು ನಾನು ಅದೇ ದಿನ ಓದಿರುತ್ತೇನೆ, ಸಮಯ ಈಗ ಹೇಳಲು ನೆನಪಿಲ್ಲ, ಅಂದಾಜಿನಲ್ಲೂ ಹೇಳಲು ಆಗುವುದಿಲ್ಲ. ದೂರಿನಲ್ಲಿ ಬರೆದ ಸಂಗತಿಗಳ ಬಗ್ಗೆ ವಿಚಾರಣೆ ಮಾಡಿರುತ್ತೇನೆ.

14. ನಾನು ಟ್ರಸ್ಟಿನ ಬಗ್ಗೆ ಕೋರಿಕೆ ಪತ್ರವನ್ನು ಬರೆದಿದ್ದು, ಅದರ ಮಾಹಿತಿ ಬರುವ ಸಮಯದಲ್ಲಿ ನಾನು ವರ್ಗಾವಣೆಗೊಂಡಿರುತ್ತೇನೆ, ಹಾಗಾಗಿ ಮಾಹಿತಿ ಏನು ಬಂದಿರುತ್ತದೆ ಎಂದು ನನಗೆ ತಿಳಿದಿಲ್ಲ. ನಾನು ಮುಖ್ಯ ವಿಚಾರಣೆಯ ಖಂಡಿಕೆ 6 ರಲ್ಲಿ ಹೇಳಿರುವಂತೆ ಶ್ರೀ ಕೊರಗಕಲ್ಲು ಸ್ವಾಮಿ ಕೊರಗಜ್ಜ ಸೇವಾ ಟ್ರಸ್ಟ್ ಬಾಡಾರು ಬಜಿರೆ ಗ್ರಾಮ, ಶ್ರೀ ಸ್ವಾಮಿ ಕೊರಗಜ್ಜ ಸೇವಾ ಟ್ರಸ್ಟ್ (ರಿ), ಕೊರಗಕಲ್ಲು , ಬಾಡಾರು, ಬಜಿರೆ ಗ್ರಾಮ, ಎಂಬುದನ್ನು ದೂರುದಾರರ ಮರುಹೇಳಿಕೆಯ ಆಧಾರದ ಮೇರೆಗೆ ಕೋರಿರುತ್ತೇನೆ. ದಿನಾಂಕ 10.08.2023ರ ಪೂರ್ವದಲ್ಲಿ ನಿಮಗೆ ಟ್ರಸ್ಟ್ ನ ಬಗ್ಗೆ ವಿಚಾರಣೆ ಮಾಡಲು ತೊಂದರೆ ಇತ್ತಾ ಎಂದರೆ ಅದರ ಬಗ್ಗೆ ಆಗ ನಮಗೆ ತಿಳಿದಿರಲಿಲ್ಲ.

15. ದೂರಿನಲ್ಲಿ ನಮೂದಿಸಿರುವಂತೆ "ಹೀಗಿರುವಾಗ ಇದೇ ಸಾನಿಧ್ಯದ ಸಮೀಪದಲ್ಲಿ ಹರೀಶ್ ಮತ್ತು ಇತರರ ................................................................................ ............................................................... ಕೊರಗಜ್ಜ ಕಲ್ಲನ್ನು ಊರಿನ ಸಾರ್ವಜನಿಕರಿಗೆ ತಿಳಿಸದೇ ತಮ್ಮ ಸ್ವಂತಕ್ಕೆ ಸ್ಥಳಕ್ಕೆ ಅಕ್ರಮವಾಗಿ ತೆಗೆದುಕೊಂಡು ಹೋಗಿರುತ್ತಾರೆ " ಎನ್ನುವ ಬಗ್ಗೆ ನಾನು ತನಿಖೆಯನ್ನು ಮಾಡಿರುತ್ತೇನೆ. ಸದರಿ ಒಕ್ಕಣಿಗೆಯ ಪ್ರಕಾರ ದೂರನ್ನು ನೀಡುವ ಮೊದಲು ಕೊರಗಜ್ಜ ಕಲ್ಲನ್ನು ಬೇರೆ ಕಡೆಗೆ ಸ್ಥಳಾಂತರಿಸಲಾಗಿದೆ ಎನ್ನುವ ಅರ್ಥ ದೂರಿನಲ್ಲಿ ಕಾಣಿಸಲಾಗಿದೆ ಎಂದರೆ ಸರಿ. ಸ್ಥಳಾಂತರ ಮಾಡಿ ಎಷ್ಟು ದೂರದಲ್ಲಿ ಹೊಸ ಕೊರಗಜ್ಜ ಕಲ್ಲನ್ನು ಸ್ಥಾಪಿಸಲಾಗಿದೆ ಎಂದು ವಿಚಾರಣೆ ಮಾಡಿರುತ್ತೀರಾ ಎಂದರೆ ಇಲ್ಲ, ಆ ಬಗ್ಗೆ ವಿಚಾರಣೆ ಮಾಡಲು ಯಾವುದೇ ತೊಂದರೆ ಇರಲಿಲ್ಲ. ಕೊರಗಜ್ಜ ಕಲ್ಲನ್ನು ಸ್ಥಳಾಂತರಿಸಿರುವ ಬಗ್ಗೆ

ಪಿರ್ಯಾದಿದಾರರು ನೀಡಿದ ನಿಪಿ-1 ರ ದೂರು ಕೊಡುವ ಪೂರ್ವದಲ್ಲಿ ಯಾವುದೇ ದೂರು ಬಂದಿರುವುದಿಲ್ಲ.

16. ತಕ್ಷೀರು ಜಾಗ ರಸ್ತೆಯ ಮಾರ್ಜಿನ್ ನಲ್ಲಿ ಬರುವ ವಿಚಾರ ನಿಮಗೆ ಗೊತ್ತಾ ಎಂದರೆ ಇಲ್ಲ. ನೀವು ವೈಯಕ್ತಿಕವಾಗಿ ಪಂಚರನ್ನು ನೇಮಿಸಲು ಪ್ರಯತ್ನ ಪಟ್ಟಿರುತ್ತೀರಾ ಎಂದರೆ ಇಲ್ಲ, ತಹಶೀಲ್ದಾರ್ ರವರಿಗೆ ಕೋರಿಕೆ ಪತ್ರವನ್ನು ನೀಡಿರುತ್ತೇನೆ. ತಹಶೀಲ್ದಾರ್ ರವರಿಗೆ ನೀಡಿದ ಕೋರಿಕೆ ಪತ್ರವನ್ನು ನೀವು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೀರಾ ಎಂದರೆ ಇಲ್ಲ, ಅದನ್ನು ನಮ್ಮ ಸಿಬ್ಬಂದಿಯವರು ಇಮೈಲ್ ಮೂಲಕ ಕಳುಹಿಸಿರುತ್ತಾರೆ.

17. ಪಿರ್ಯಾದಿದಾರರು ನಿಪಿ-1 ರಲ್ಲಿ, ಆರೋಪಿಯ ಕುಟುಂಬದವರು ಕುಟುಂಬದ ಟ್ರಸ್ಟ್ ಮಾಡಿಕೊಂಡಿರುವ ಬಗ್ಗೆ ನಮೂದು ಮಾಡಲಾಗಿದೆ ಮತ್ತು ಅದರ ಬಗ್ಗೆ ನಾನು ತಿಳಿದಿರುತ್ತೇನೆ ಮತ್ತು ಆ ಬಗ್ಗೆ ವಿಚಾರಣೆ ಮಾಡಿರುತ್ತೇನೆ. ನಾನು ಸಂಬಂಧಪಟ್ಟ ಇಲಾಖೆಗೆ ಟ್ರಸ್ಟ್ ನೊಂದಣಿ ಯಾಗಿರುವ ಬಗ್ಗೆ ದಿನಾಂಕ 24.07.2023 ರಂದು ಕೋರಿಕೆ ಪತ್ರ ನೀಡಿರುತ್ತೇನೆ. ಮೌಖಿಕವಾಗಿ ವಿಚಾರಣೆ ಮಾಡಿ, ನಾನು ಶ್ರೀ ಸ್ವಾಮಿ ಕೊರಗಜ್ಜ ಸೇವಾ ಟ್ರಸ್ಟ್ (ರಿ), ಕೊರಗಕಲ್ಲು , ಬಾಡಾರು, ಬಜಿರೆ ಗ್ರಾಮ ಎಂದು ನಮೂದು ಮಾಡಿರುತ್ತೇನೆ. ನಾನು ಆರೋಪಿಯ ಕುಟುಂಬದವರಿಗೆ ಸದರಿ ಟ್ರಸ್ಟಿಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ನೀಡುವಂತೆ ನೋಟಿಸು ನೀಡಿರುವುದಿಲ್ಲ.

18. ದೂರಿನಲ್ಲಿ "ಪುನರ್ ಪ್ರತಿಷ್ಟೆ ಮಾಡುವ ನಿಟ್ಟಿನಲ್ಲಿ ಇದ್ದು" ಎನ್ನುವುದು ದೂರುದಾರರ ಇಚ್ಛೆಯನ್ನು ವ್ಯಕ್ತಪಡಿಸುತ್ತದೆ ಎಂದರೆ ನನಗೆ ಆ

ಬಗ್ಗೆ ಹೇಳಲು ಆಗುವುದಿಲ್ಲ. ಆ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ. ಸದರಿ ಟರ್ಪಾಲು ಹೊದಿಸಿದ್ದು ಮತ್ತು ತೆಂಗಿನಗರಿಯನ್ನು ಹಾಕಲಾಗಿದೆ ಎನ್ನುವ ಬಗ್ಗೆ ದೂರಿನಲ್ಲಿ ನಮೂದು ಇದ್ದು ಅವುಗಳನ್ನು ಯಾರು ಯಾವಾಗ ಹಾಕಿರುತ್ತಾರೆ ಎಂದು ವಿಚಾರಣೆ ಮಾಡಿರುತ್ತೀರಾ ಎಂದರೆ ಹೌದು, ಅದನ್ನು ಬರವಣಿಗೆಯಲ್ಲಿ ತೋರಿಸಿರುತ್ತೇನೆ. ಆ ಬಗ್ಗೆ ಸಾಕ್ಷಿದಾರರ ಹೇಳಿಕೆಯಲ್ಲಿ ತೋರಿಸಲಾಗಿದೆ, ಅದರಲ್ಲಿ ದಿನಾಂಕ ಮತ್ತು ವರ್ಷ ನಮೂದಾಗಿರುವುದಿಲ್ಲ.

19. ದಿನಾಂಕ 11.07.2023 ರಂದು ನಮ್ಮ ಠಾಣೆಯ SHO ರವರು ಹೆಚ್ ಸಿ 335 ರವರಾಗಿದ್ದು, ಅವರು ಬೆಳಗ್ಗೆ 8.00 ಗಂಟೆಯಿಂದ ರಾತ್ರಿ 8.00 ಗಂಟೆಯವರೆಗೆ ಅವರ ಪಾಳಿಯ ಕರ್ತವ್ಯ ಅಗಿರುತ್ತದೆ, ಅವರು ಎರಡು ಪಾಳಿಗಳಲ್ಲಿ SHO ಆಗಿರುತ್ತಾರೆ. ಪ್ರ.ವ ವರದಿಯನ್ನು ಅದೇ ದಿನ ಡಬ್ಲ್ಯೂ ಪಿ ಸಿ 2438 ರವರು ನ್ಯಾಯಾಲಯಕ್ಕೆ ಸಂಜೆ 4.00 ಗಂಟೆಗೆ ತೆಗೆದುಕೊಂಡು ಹೋಗಿರುತ್ತಾರೆ.

20. ಆರೋಪಿಯ ದಸ್ತಗಿರಿ ಮೆಮೊವನ್ನು ನಾನೇ ತಯಾರಿಸಿರುತ್ತೇನೆ , ಅದನ್ನು 18.30 ಗಂಟೆಗೆ ತಯಾರು ಮಾಡಿರುತ್ತೇನೆ. ಸಮಯವನ್ನು ನಮೂದು ಮಾಡುವುದು ಕಡ್ಡಾಯವಾಗಿರುತ್ತದೆ. ಸದರಿ ದಸ್ತಗಿರಿ ಮೆಮೊವನ್ನು ನ್ಯಾಯಾಲಯಕ್ಕೆ ಹಾಜರುಮಾಡಿರುತ್ತೇನೆ. ನನ್ನನ್ನು ನೋಡಿ ಆರೋಪಿ ಓಡಲು ಪ್ರಯತ್ನಿಸಿರುವುದಿಲ್ಲ. ಆರೋಪಿಯ ಕಬೂಲಾತಿ ಹೇಳಿಕೆಯನ್ನು ಮಾಡುವಾಗ ಯಾರೆಲ್ಲಾ ವ್ಯಕ್ತಿಗಳು ಮತ್ತು ಪಂಚರು ಉಪಸ್ಥಿತರಿದ್ದರು ಎನ್ನುವ ಬಗ್ಗೆ ನಮೂದು ಮಾಡಿರುತ್ತೇನೆ, ಆದರೆ ಅವರುಗಳ ಸಹಿಗಳನ್ನು ಪಡೆದಿರುವುದಿಲ್ಲ. ನಾನು ಹೇಳುವ ಕಬೂಲಾತಿ ಹೇಳಿಕೆ ನಿಪಿ-13 ಆಗಿದ್ದು ಅದರಲ್ಲಿ ಆ ಸಮಯದಲ್ಲಿ ಉಪಸ್ಥಿತರಿದ್ದ

ಪಂಚರು ಮತ್ತು ವ್ಯಕ್ತಿಗಳ ಹೆಸರು ನಮೂದು ಇರುವುದಿಲ್ಲ ಮತ್ತು ಸದರಿ ಕಬೂಲಾತಿ ಹೇಳಿಕೆ ಬಿಟ್ಟರೆ ಬೇರೆ ಯಾವುದೇ ಕಬೂಲಾತಿ ಹೇಳಿಕೆ ಇರುವುದಿಲ್ಲ.

21. ಚಾಸಾ-6 ಮತ್ತು 7 - ಗ್ರಾಮ ಲೆಕ್ಕಾಧಿಕಾರಿ ಮತ್ತು ಸರ್ವೆಯರ್ ರವರ ಸಹಿಗಳನ್ನು ಯಾವುದೇ ದಾಖಲೆಗಳಿಗೆ ಠಾಣೆಯಲ್ಲಿ ಪಡೆದಿರುತ್ತೀರಾ ಎಂದರೆ ಇಲ್ಲ. ಚಾಸಾ-6 ಮತ್ತು 7 ರವರಿಗೆ ತಹಶೀಲ್ದಾರ್ ರವರು ಸದರಿ ಸ್ಥಳಕ್ಕೆ ಹೋಗಲು ಆದೇಶ ಮಾಡಿದ ಬಗ್ಗೆ ಪ್ರತಿಯನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಇಲ್ಲ.

22. ಮೊಬೈಲ್ ನ ವಿಡಿಯೋ ಮತ್ತು ಸಿಡಿಗಳಿಗೆ ಸಂಬಂದಪಟ್ಟಂತೆ ನಮ್ಮ ಠಾಣೆಯಲ್ಲಿ ನುರಿತವರು ಇದ್ದಾರೆ. ಸಿಡಿ ಮತ್ತು ಮೊಬೈಲ್ ಗಳಲ್ಲಿದ್ದ ದೃಶ್ಯಾವಳಿಗಳು ತಿದ್ದುಪಡಿ (TAMPER) ಮಾಡಲಾಗಿದೆಯೋ ಇಲ್ಲವೋ ಎನ್ನುವ ಬಗ್ಗೆ ದಾಖಲೆಯಲ್ಲಿ ನಮೂದು ಮಾಡಿರುತ್ತೀರಾ ಎಂದರೆ ಇಲ್ಲ. ನಾನು ವೈಯಕ್ತಿಕವಾಗಿ ಸದರಿ ದೃಶ್ಯಾವಳಿಗಳ ನೈಜತೆಯನ್ನು ಪರಿಶೀಲಿಸಿರುವುದಿಲ್ಲ. ಚಾಸಾ-2 ರವರು ನ್ಯಾಯಾಲಯದ ಮುಂದೆ ಅವರ ಮೊಬೈಲನ್ನು ಗಣೇಶ್ ರವರಿಗೆ ನೀಡಿರುವ ಬಗ್ಗೆ ಹೇಳಿದ್ದು, ಅದನ್ನು ನಿಮ್ಮ ಬಳಿ ಹೇಳಿರುತ್ತಾರಾ ಎಂದರೆ ಆ ಬಗ್ಗೆ ಅವರ ಹೇಳಿಕೆಯಲ್ಲಿ ದಾಖಲಾಗಿರುತ್ತದೆ.

23. ಮೊಬೈಲ್ ನಲ್ಲಿದ್ದ ದೃಶ್ಯಾವಳಿಗಳನ್ನು ನಾನು ಪ್ರಥಮ ಬಾರಿಗೆ ದಿನಾಂಕ 10.08.2023 ರಂದು ನೋಡಿದ್ದು ಅದು continuous ವಿಡಿಯೋ ಆಗಿರುತ್ತದೆ. ನೀವು ಸದರಿ ವಿಡಿಯೋದಲ್ಲಿ ಆರೋಪಿ ಕಟ್ಟೆಯಿಂದ ಹೊರಗೆ ಬರುತ್ತಿರುವುದನ್ನು ನೋಡಿರುತ್ತೀರಾ ಎಂದು ಹೌದು. ಸದರಿ ವಿಡಿಯೋವನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

24. ನನ್ನ ಮುಖ್ಯ ವಿಚಾರಣೆಯ ಖಂಡಿಕೆ -7 ರ ಹೇಳಿರುವಂತೆ ಸದರಿ ಸಿಡಿಯಲ್ಲಿದ್ದ ದೃಶ್ಯಾವಳಿಗಳನ್ನು ಪರಿಶೀಲಿಸಲಾಗಿ, ಆರೋಪಿತನು ಸದರಿ ಕೊರಗಜ್ಜನ ಕಟ್ಟೆಯ ಒಳಗಿನಿಂದ ಬರುವ ದೃಶ್ಯ ಹಾಗೂ ಅದೇ ಸಮಯ ಬೆಂಕಿ ಹಾಗೂ ಹೊಗೆ ಬರುತ್ತಿರುವ ದೃಶ್ಯ ಕಂಡು ಬಂದಿರುತ್ತದೆ ಎಂದು ಹೇಳಿದ್ದು, ಸದರಿ ದೃಶ್ಯಾವಳಿಯು ನ್ಯಾಯಾಲಯದ ಮುಂದೆ ಇರುವ ದೃಶ್ಯಾವಳಿಯಲ್ಲಿ ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತನಿಖೆಯಲ್ಲಿ ಮೊದಲು ಯಾರು ಕೊರಗಜ್ಜ ಕಟ್ಟೆಗೆ ದೀಪ ಇಡುತ್ತಿದ್ದರು ಎನ್ನುವ ಬಗ್ಗೆ ವಿಚಾರ ಮಾಡಿರುವುದಿಲ್ಲ. ಆರೋಪಿ ತನ್ನ ಮುಂದೆ ಕಬೂಲಾತಿ ಹೇಳಿಕೆಯಲ್ಲಿ ತಾನು ಕೊರಗಜ್ಜನ ಕಟ್ಟೆಗೆ ಹಣತೆಯಿಂದ ಬೆಂಕಿ ಹಚ್ಚಿರುವುದಾಗಿ ಹೇಳಿ, ಸದರಿ ಹಣತೆಯನ್ನು ತೋರಿಸಿಕೊಟ್ಟಿರುತ್ತಾರೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನೀಲಿ ಟರ್ಪಾಲು ತುಂಡಾಗಿತ್ತು, ಎಷ್ಟು ತುಂಡು ಎಂದು ನನಗೆ ತಿಳಿದಿಲ್ಲ.

25. ಪಿರ್ಯಾದಿದಾರರ ಸಹಿಯನ್ನು ನಾನು ಠಾಣೆಯಲ್ಲಿ ಪಡೆದಿರುವುದಿಲ್ಲ. ನಾನು ಮಹಜರನ್ನು ಮತ್ತು ಹೇಳಿಕೆಯನ್ನು ಪ್ರಿಂಟ್ ಮಾಡಿ ತರಲು ಸಿಬ್ಬಂದಿಯನ್ನು ಠಾಣೆಗೆ ಕಳುಹಿಸಿರುತ್ತೇನೆ, ಅವರು ಮೂರು ಬಾರಿ ಎಂದರೆ ಕಬೂಲಾತಿ ಹೇಳಿಕೆ, ತಕ್ಷೀರು ಸ್ಥಳದ ಮಹಜರು ಮತ್ತು ಸ್ವತ್ತು ಸ್ವಾಧೀನತಾ ಮಹಜರಿನ ಪ್ರಿಂಟ್ ತೆಗೆಯಲು ಹೋಗಿರುತ್ತಾರೆ. ನಾನು ಸಿಬ್ಬಂದಿಯನ್ನು ಠಾಣೆಗೆ ಪ್ರಿಂಟ್ ತರಲು ಕಳುಹಿಸಿದ ಬಗ್ಗೆ ದಾಖಲೆಗಳಲ್ಲಿ ನಮೂದು ಮಾಡಿಲ್ಲ. ನನಗೆ ಕನ್ನಡ ಟೈಪಿಂಗ್ ಬರುವುದಿಲ್ಲ. ನಾವು ಸ್ಥಳದಲ್ಲೇ ಪ್ರಿಂಟನ್ನು ತೆಗೆದಿರುವುದಿಲ್ಲ.

26. ಫೋಟೋಗಳನ್ನು ತೆಗೆದ ಬಗ್ಗೆ ನನ್ನ ತನಿಖಾ ಅವಧಿಯಲ್ಲಿ 65 ಬಿ ಪ್ರಮಾಣ ಪತ್ರವನ್ನು ಪಡೆದಿರುವುದಿಲ್ಲ. ಕ್ರೈಂ ನಂಬ್ರ 40/2023 ದಿನಾಂಕ 13.07.2023 ರಂತೆ ಡಾಃರಾಜೇಶ್ ಬಾದ್ರಿಲ ರವರು ಸದರಿ ಪ್ರಕರಣದ ದೂರುದಾರರ ಮೇಲೆ ನಿಮ್ಮ ಸಮಯದಲ್ಲಿ ದೂರು ನೀಡಿರುವ ಬಗ್ಗೆ ನಿಮಗೆ ತಿಳಿದಿದೆಯಾ ಎಂದರೆ ಇಲ್ಲ. ಮೇಲೆ ಹೇಳಿದ ಪ್ರಕರಣದ ಬಗ್ಗೆ ನನ್ನ ಕರ್ತವ್ಯದ ಅವಧಿಯಲ್ಲಿ ಅದು ನನ್ನ ಗಮನದಲ್ಲಿ ಇರದ ಕಾರಣ, ನಾನು ತನಿಖೆಯನ್ನು ಮಾಡಿರುವುದಿಲ್ಲ ಮತ್ತು ರಾಜೇಶ್ ಬಾದ್ರಿಲರವರಿಗೆ ನೋಟಿಸನ್ನು ನೀಡಿರುವುದಿಲ್ಲ. ತಕ್ಷೀರು ಸ್ಥಳದಲ್ಲಿ ಯಾವುದೇ ಕೊರಗಜ್ಜನ ಕಲ್ಲು ಇರದೇ ಇರುವುದರಿಂದ ಅದು ಪ್ರದೀಪ್ ಕುಮಾರ್ ರವರಿಗೆ ರೋಚಕ ಸುದ್ದಿಯಾಗಬೇಕೆಂದು ಸುಳ್ಳು ದೂರನ್ನು ನೀಡಿರುತ್ತಾರೆಂದರೆ ಸರಿಯಲ್ಲ.

27. ನಾನು ಸರಿಯಾದ ರೀತಿಯಲ್ಲಿ ಯಾವುದೇ ತನಿಖೆಯನ್ನು ಮಾಡಿರುವುದಿಲ್ಲ ಮತ್ತು ಯಾರ ಹೇಳಿಕೆಗಳನ್ನು ಪಡೆದಿರುವುದಿಲ್ಲ ಮತ್ತು ಯಾವುದೇ ಮಹಜರನ್ನು ಮಾಡಿರುವುದಿಲ್ಲಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳನ್ನು ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಫೋಟೊಗಳನ್ನು ಮತ್ತು ಮುದ್ದೆಮಾಲುಗಳನ್ನು ಈ ಕೇಸಿಗಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿಯ ಹತ್ತಿರ ದೀಪವನ್ನು ಯಾರು ಉರಿಸುತ್ತಿದ್ದರು ಎಂದು ವಿಚಾರಿಸಿರುವುದಿಲ್ಲ. ಮರುದಿನ ಆಕಸ್ಮಿಕ ಘಟನೆಯಾಗಿ ಬೆಂಕಿ ಹತ್ತಿರುವ ಬಗ್ಗೆ ಉದಯವಾಣಿ ದಿನಪತ್ರಿಕೆಯಲ್ಲಿ ಬಂದಿರುವ ಬಗ್ಗೆ ನಿಮ್ಮ ಗಮನಕ್ಕೆ ಬಂದಿರುತ್ತದಾ

ಎಂದರೆ ಇಲ್ಲ. ವಿಡಿಯೋಗಳು ಪದೇ ಪದೇ internet, you tube and face book ನಲ್ಲಿ ದೂರುದಾರರು ಪ್ರಚಾರ ಪಡಿಸಿದ್ದರ ಬಗ್ಗೆ ನನ್ನ ಗಮನಕ್ಕೆ ಬಂದಿರುವುದಿಲ್ಲ. ಸರ್ಕಾರಿ ಜಾಗ ಎಂದು ಆರೋಪಿ ಕುಟುಂಬದವರು ಅಲ್ಲಿ ಯಾವುದೇ ಕಾಮಗಾರಿಯನ್ನು ಮಾಡಬಾರದು ಎಂದು ತಹಶೀಲ್ದಾರ್ ರವರಿಂದ ತಡೆ ಒಡ್ಡಿರುವ ಬಗ್ಗೆ ನನ್ನ ಗಮನದಲ್ಲಿ ಇಲ್ಲ. ಕೊರಗಜ್ಜನ ಕಲ್ಲು ಎಂದು ಇಲ್ಲದ ವಿಷಯವನ್ನು ಉಂಟು ಎಂದು ಪಿರ್ಯಾದಿದಾರರು ಅವರಿಗೆ ಸರ್ಕಾರಿ ಜಾಗದಲ್ಲಿ ಹಕ್ಕು ಬರಬೇಕು ಎಂದು, ಸದರಿ ಪ್ರಕರಣದ ಘಟನೆಯನ್ನು ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯ ಮನಗೆ ಹೋಗುವ ಮಾರ್ಗ ಮತ್ತು ಮುಖ್ಯ ರಸ್ತೆಯಿಂದ ಅವರ ಮನೆಗೆ ಹೋಗುವ ಮಾರ್ಗವನ್ನು ಮತ್ತು ಅದು ಎಷ್ಟು ದೂರದಲ್ಲಿ ಎನ್ನುವ ವಿಚಾರವನ್ನು ಮಹಜರಿನಲ್ಲಿ ಸರಿಯಾಗಿ ತೋರಿಸಿದ್ದೀರಾ ಎಂದರೆ ಹೌದು, ಆ ಬಗ್ಗೆ ಕರಡು ನಕಾಶೆಯನ್ನು ಮಾಡಲಾಗಿರುತ್ತದೆ ಮತ್ತು ಅಂದಾಜಿನ ಮೇಲೆ ಅಳತೆಯನ್ನು ನಮೂದು ಮಾಡಲಾಗಿರುತ್ತದೆ. ನಿರ್ದಿಷ್ಟವಾಗಿ ಅಳತೆ ಮಾಡಲು ತೊಂದರೆ ಇತ್ತಾ ಎಂದರೆ ಸಾಮಾನ್ಯವಾಗಿ ಮಹಜರು ಮಾಡುವ ಸಮಯದಲ್ಲಿ ಅಂದಾಜಿನ ಮೇಲೆ ಅಳತೆ ಮಾಡುತ್ತೇವೆ. ಚಾಸಾ-6 ಮತ್ತು 7 ರವರನ್ನು ಪಂಚರಾಗುವಂತೆ ತಕ್ಷೀರು ಸ್ಥಳದ ಮಹಜರನ್ನು ಮತ್ತು ನಕ್ಷೆ ತಯಾರಿಸುವ ಸಮಯಕ್ಕೆ ಕರೆಯಲಾಗಿತ್ತು. ಅವರುಗಳು ಅದೇ ತಾಲೂಕಿನಲ್ಲಿ ಇದ್ದರು, ಎಷ್ಟು ಅಂತರದಲ್ಲಿ ಇದ್ದರು ಎಂದು ಹೇಳಲು ಬರುವುದಿಲ್ಲ. ಚಾಸಾ-6 ಮತ್ತು 7 ರವರ ಬೆಳ್ತಂಗಡಿ ತಾಲೂಕು ಕಚೇರಿ ಅಂದಾಜು 15-20 ಕಿ.ಮೀ ಇರುತ್ತದೆ. ನಾನು ಘಟನೆಯಾದ ಕೂಡಲೇ ಪ್ರಥಮ ಬಾರಿ ಸಿಬ್ಬಂದಿಗಳನ್ನು ತಕ್ಷೀರು ಸ್ಥಳಕ್ಕೆ ಕಳುಹಿಸಿರುವುದಿಲ್ಲ. ಘಟನೆಯ ಬಗ್ಗೆ ನನಗೆ ಸಂಜೆ 4.00 ಗಂಟೆಗೆ ಪ್ರಥಮವಾಗಿ

ತಿಳಿದಿರುತ್ತದೆ. SHO ರವರು ಘಟನಾ ಸ್ಥಳಕ್ಕೆ ಸಿಬ್ಬಂದಿಗಳನ್ನು ಕಳುಹಿಸಿರುವುದಿಲ್ಲ. ಪಿರ್ಯಾದಿದಾರರು ಹಾಕಿದ ಸುಳ್ಳು ಕೇಸಿಗೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

28. ಎಂ.ಒ-1 ಮತ್ತು 2 ಎಲ್ಲಾ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸಿಗುತ್ತದೆ ಎಂದರೆ ಸರಿ. ಸದರಿ ದೂರಿನಲ್ಲಿ ಸಾರ್ವಜನಿಕರು ಎಂ.ಒ-1 ಮತ್ತು 2 ನ್ನು ಹಾಕಿರುವುದಾಗಿ ಹೇಳಲಾಗಿರುತ್ತದೆ. ಸದರಿ ಸಾರ್ವಜನಿಕರಲ್ಲಿ ದೂರುದಾರರು ಬರುವುದಿಲ್ಲ. ತೆಂಗಿನಗರಿಯನ್ನು ಯಾಕೆ ಹಾಕಲಾಗಿರುತ್ತದೆ ಎನ್ನುವ ಬಗ್ಗೆ ವಿಚಾರಣೆ ಮಾಡಿರುತ್ತೀರಾ ಎಂದರೆ ಅದು ಅವಶ್ಯಕವಲ್ಲದ ಕಾರಣ ಅದರ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ನ್ಯಾಯಾಲಯದಲ್ಲಿ ತೋರಿಸಿದ ಸಿಡಿಯ ದೃಶ್ಯದಲ್ಲಿ ಆರೋಪಿಯ ಎದುರುಗಡೆ ಕಟ್ಟೆ ಇರುತ್ತದಾ ಅಥವಾ ಅವರ ಹಿಂದೆ ಇರುತ್ತದಾ ಎಂದರೆ ಆರೋಪಿಯ ಹಿಂದುಗಡೆ ಕಟ್ಟೆ ಇರುತ್ತದೆ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.